## ತೇಜಸ್ವಿ ನೆನಪಿನ ದೋಣಿಯಲ್ಲಿ- 5

ಪೂರ್ಣಚಂದ್ರ ತೇಜಸ್ವಿ ಕಥೆಗಳನ್ನು ಎಷ್ಟು ಸಲ ಬೇಕಾದರೂ ಓದಬಹುದು, ಬೋರಾಗೋದಿಲ್ಲ. ಹಾಗೆಯೇ ಅವರ ನೆನಪುಗಳು; ಮೊಗೆದಷ್ಟೂ ಮೇಲಕ್ಕೆ ಬರುತ್ತವೆ. ಮೂಡಿಗೆರೆಯಲ್ಲಿ ಅವರೊಂದಿಗೆ ಒಡನಾಡಿದ ಕೆಲವು ಅಪರೂಪದ ಪ್ರಕರಣಗಳು ಇಲ್ಲಿವೆ..

# ‘ಥುತ್! ಪೊಲೀಸ್ ಇಟ್ಕೊಂಡು ಹಬ್ಬ ಮಾಡ್ಬೇಕಾ?’



‘ಈ ದೇಶ ದೇವರ ದಯೆಯಿಂದ ನಡೀತಿದೆ ಕಣಯ್ಯಾ.
ಆ ತಾಲಿಬಾನಿಗಳಿಗೂ, ಈ ಭಜರಂಗಿಗಳಿಗೂ ನನಗೇನೂ ವ್ಯತ್ಯಾಸ ಕಾಣಿಸ್ತಿಲ್ಲ.
ಮುಲ್ಲಾನ ಗಡ್ಡದಷ್ಟೇ ಈ ಸನಾತನಿಗಳ ಜುಟ್ಟು ಅಪಾಯಕಾರಿಯಾಗ್ತಿದೆ.
ಯಾರಯ್ಯಾ ಇವರಿಗೆಲ್ಲಾ ಕೂರಿಸಿ ಬುದ್ಧಿ ಹೇಳೋದು?’

■ ಧನಂಜಯ ಜೀವಾಳ ಬಿ.ಕೆ.



ಹೀಗೆ ಒಮ್ಮೆ ಗೆಳೆಯ ಬಾಪೂ, ದಿನೇಶ್‌ರೊಂದಿಗೆ ಎಂದಿನಂತೆ ಮೂಡಿಗೆರೆ ಪೇಟೆಗೆ ಬಂದಿದ್ದ ತೇಜಸ್ವಿ ಬೀದಿ ಬದಿಯಲ್ಲಿ ಪೋಲೀಸರು ನಿಂತಿದ್ದು ಹಾಗೂ ವಿಪರೀತ ಜನಸಂದಣಿ ಇದ್ದುದನ್ನು ನೋಡಿದರು. ‘ಏನಯ್ಯಾ ಇದು ಇಷ್ಟೊಂದು ಗಡಿಬಿಡಿ? ಸೆಕ್ಯುರಿಟಿ?’ ಎಂದು ವಿಚಾರಿಸಿದರು. ಅಲ್ಲೇ ನಿಂತಿದ್ದ ಪೇಪರ್ ಮಾರುವ ಜಾಹಿರ್ ‘ಅಣ್ಣಾ ಇವತ್ತು ನಮ್ಮ ಬಕ್ರೀದ್ ಅಲ್ವಾ.. ಅದಕ್ಕೆ ಪ್ರೊಸೆಷನ್ ಇರುತ್ತೆ, ಅದಕ್ಕೆ ಪೋಲೀಸ್’ ಎಂದರು.

ಕೊಂಚ ಹೊತ್ತು ಮೌನವಾಗಿ ಜಹೀರ್ ಮತ್ತವರ ಬಂಧುಗಳ ಮುಖವನ್ನೇ ಸಹಾನುಭೂತಿಯಿಂದ ನೋಡಿದ ತೇಜಸ್ವಿ, ‘ಥುತ್! ಪೋಲೀಸ್ ಇಟ್ಕೊಂಡ್ ಹಬ್ಬ ಮಾಡ್ಬೇಕಾ? ನಾಚ್ಕೆಯಾಗುತ್ತೆ ಅಲ್ವಾ?’ ಎಂದವರೇ ಜಿಗುಪ್ಸೆಯಿಂದ ಮನೆಕಡೆಗೆ ಟುರ್ರ್‌ರ್ ಎಂದು ಹೊರಟರು. ಕೆಲ ದಿನಗಳ ನಂತರ ಸಂಜೆಯ ಹರಟೆಯಲ್ಲಿ ‘ಈ ದೇಶ ದೇವರ ದಯೆಯಿಂದ ನಡೀತಿದೆ ಕಣಯ್ಯಾ. ಆ ತಾಲಿಬಾನಿಗಳಿಗೂ, ಈ ಭಜರಂಗಿಗಳಿಗೂ ನನಗೇನೂ ವ್ಯತ್ಯಾಸ ಕಾಣಿಸ್ತಿಲ್ಲ. ಮುಲ್ಲಾನ ಗಡ್ಡದಷ್ಟೇ ಈ ಸನಾತನಿಗಳ ಜುಟ್ಟು ಅಪಾಯಕಾರಿಯಾಗ್ತಿದೆ. ಯಾರಯ್ಯಾ ಇವರಿಗೆಲ್ಲಾ ಕೂರಿಸಿ ಬುದ್ಧಿ ಹೇಳೋದು? ಹೇಳಿದ್ರೂ ಈ ಅಯೋಗ್ಯರು ಕೇಳ್ತಾರಾ?’ ಎಂದು ಬೇಜಾರು ಮಾಡ್ಕೊಂಡಿದ್ರು.

****

ಮೂಡಿಗೆರೆಯ ಪಶ್ಚಿಮ ಘಟ್ಟದ ನಡುವೆ ಇರುವ ಅಪ್ಪಟ ಮಲೆನಾಡಾದರೂ ಪಟ್ಟಣದ ನಡುವೆ ಬೆರಳೆಣಿಕೆಯಷ್ಟೂ ಮರಗಳಿಲ್ಲ. 10–12 ಮರ ಮಾತ್ರ ಮೂಡಿಗೆರೆ– ಬೇಲೂರು ರಸ್ತೆಯಲ್ಲಿ ಬಸ್ ಸ್ಟ್ಯಾಂಡ್‌ನಿಂದ ತಾಲೂಕು ಕಛೇರಿಯವರೆಗೆ ಅದು ಹೇಗೋ ಉಳಿದುಕೊಂಡಿದ್ದವು. ಅವೂ ಸಹಾ 1960ರ ದಶಕದಲ್ಲಿ ಆಗಿನ ಮುನ್ಸಿಪಾಲಿಟಿಯ ರಂಗರಾಜಯ್ಯ ಹಾಗೂ ಅವರ ಸಂಗಡಿಗರು ಉತ್ಸಾಹದಿಂದ ನೆಟ್ಟಿದ್ದು. ಆ ನಂತರ ಬಂದವರು ಆಸ್ಪತ್ರೆ, ಕ್ರೀಡಾಂಗಣ, ಶಾಲೆ, ಉದ್ಯಾನಗಳಿರಲಿ ಕಡೆಗೆ ಶೌಚಾಲಯಕ್ಕೂ ಜಾಗವಿಲ್ಲದಂತೆ, ದಿಕ್ಕು–ದೆಸೆ ಗೊತ್ತುಗುರಿಯಿಲ್ಲದಂತೆ ಊರೆಲ್ಲಾ ಸೂರೆ ಹೋಗುತ್ತಿದ್ದರೂ ‘ನನಗೇನೂ ಗೊತ್ತಿಲ್ಲ’ ಎಂಬಂತೆ ಬಂದರು.. ಹೋದರು.

ಆ ಮರಗಳನ್ನು ವಿನಾ ಕಾರಣ ಅಥವಾ ಸೌದೆ ಮರಮಟ್ಟುಗಳಿಗಾಗಿ ಕಡಿಯಲು ತರಾತುರಿಯಲ್ಲಿ ಟೆಂಡರ್ ಕರೆಯಲಾಯ್ತು. ಅದು ಹೇಗೋ ನಮ್ಮ ಗಮನಕ್ಕೆ ಬಂದು ಜಿಲ್ಲಾಧಿಕಾರಿಗಳಿಗೆ ದೂರು ನೀಡಿದೆವು. ಅದರ ಹಿಂದೆಯೇ ನಮ್ಮ ತಂಡದ ಹುಡುಗರೆಲ್ಲಾ ‘ಅಪ್ಪಿಕೋ ಚಳುವಳಿ’ಗೆ ಸಿದ್ಧರಾಗಿ ನಿಂತೆವು. ಅಂತೂ ಕಡೆಗೆ ಅಧ್ಯಕ್ಷ, ಮೇಸ್ತ್ರಿ, ಗರಗಸ, ಕೊಡಲಿ, ಕತ್ತಿಗಳೆಲ್ಲಾ ಬರಿಗೈಲಿ ವಾಪಸ್ಸಾದವು. ಪತ್ರಿಕೆಗಳ ಮೂಲಕ ಈ ವಿಚಾರ ತೇಜಸ್ವಿಯವರಿಗೆ ತಲುಪಿತು. ನಮ್ಮ ತಂಡದ ಸದಸ್ಯರೆಲ್ಲರನ್ನೂ ಅವರು ಪ್ರೀತಿಯಿಂದ ಅಭಿಮಾನದಿಂದ ಅಭಿನಂದಿಸಿದರು. ‘ಮರಗಳು ವೋಟ್ ಹಾಕಲ್ವಲ್ಲ.. ಅದೇ ಸಮಸ್ಯೆ ಕಣಯ್ಯಾ’ ಅಂದಿದ್ದರು.

ಮೂರು ವರ್ಷ ಕಳೆಯಿತು, ಈ ಬಾರಿ ಮುನ್ಸಿಪಾಲಿಟಿಯವರು ರಾಜಕೀಯ ಹಾಗೂ ಆಡಳಿತಾತ್ಮಕ ದೂರಾಲೋಚನೆಗಳನ್ನು ಹೊಂದಿಸಿಕೊಂಡು ಸಕಲ ಸಿದ್ಧತೆಗಳೊಂದಿಗೆ ಯಾವುದೇ ಸುಳಿವನ್ನೂ ಹೊರ ಬಾರದಂತೆ ಹರಕತ್ತು ಮಾಡಿಕೊಂಡು ಮರ ಕಡಿಯಲು ಪ್ರಾರಂಭಿಸಿಯೇ ಬಿಟ್ಟರು. ತೀರಾ ಕುತ್ತಿಗೆಗೆ ಬಂದ ಸಮಯ. ಅಧಿಕಾರಿಗಳು ‘ಔಟ್ ಆಫ್ ಕವರೇಜ್ ಏರಿಯಾ’ ಆಗಿದ್ದರು. ಸ್ಥಳೀಯ ಅಧಿಕಾರಿಗಳು ‘ಅಲ್ಲೇ ಸ್ವಲ್ಪ ಡಿಸ್ಕಷನ್ ಮಾಡಿಕೊಳ್ಳಿ’ ಎಂದರು.

ಅಂತಿಮವಾಗಿ ತೇಜಸ್ವಿಯವರಿಗೆ ಫೋನ್ ಮಾಡಿ ‘ನಿಮ್ಮಿಂದ ಏನಾದ್ರೂ ಪ್ರಯತ್ನ ಮಾಡೋಕ್ಕೆ ಸಾಧ್ಯ ಇದೆಯಾ’ ಅಂದಾಗ, ‘ಅಲ್ಲಾ ಆ ಹಣ್ಣಿನಂಗಡಿಯವರು, ಚಪ್ಪಲಿ ಅಂಗಡಿಯವರು ರಸ್ತೆಯ ಎರಡೂ ಬದಿ ಗುಡಾರಗಳನ್ನ ಹಾಕಿಕೊಂಡು ಏನ್ ಏನ್ ರಗಳೆ ಮಾಡ್ತಿದಾರಲ್ಲಯ್ಯ, ರಸ್ತೆನಾದ್ರೂ ಅಗಲ ಆಗ್ಲಿ ಬಿಡಯ್ಯಾ.. ಮತ್ತೆ ಗಿಡಾ ನೆಡ್ತಾರಂತಲ್ಲ’ ಎಂದು ಹೇಳಿ ನಮ್ಮನ್ನೆಲ್ಲಾ ನಿರಾಸೆಗೊಳಿಸಿದ್ದು ನನಗಿನ್ನೂ ಅರ್ಥವಾಗದ ‘ಚಿದಂಬರ ರಹಸ್ಯ’ವಾಗೇ ಉಳಿದಿದೆ! ಏನು ಮಾಡಿದ್ರೂ ಇಷ್ಟೇನೇ ಅನ್ನಿಸಿತ್ತೋ ಅಥವಾ ಪರಿಸರ ಚಳುವಳಿ ಒಂದು ಲೂಸಿಂಗ್ ಬ್ಯಾಟಲ್ ಎಂದು ಮನವರಿಕೆಯಾಗಿತ್ತೋ ಏನೋ! ಆದರೆ ನಮಗಂತೂ ‘ಅರೇ ಇದ್ದುದೊಂದು ಕೊನೆಯ ಸಾಧ್ಯತೆಯೂ ನೇಪಥ್ಯಕ್ಕೆ ಸರಿಯಿತಲ್ಲಾ’ ಎನಿಸಿತು.

ಯಾವುದನ್ನೂ ‘ಇದು ಹೀಗೆ, ಅದು ಹಾಗೆ’ ಎಂದು ತೀರ್ಮಾನಿಸುವ ಗೋಜಿಗೇ ಹೋಗದೆ ಅಡ್ಡಗೋಡೆಯ ಮೇಲೆ ದೀಪವಿಟ್ಟು ನಮ್ಮಂತ ಹಲವರನ್ನು ಯೋಚನೆಗೆ ಹಚ್ಚುತ್ತಿದ್ದರು ತೇಜಸ್ವಿ. ಪರಸ್ಪರ ವಿರುದ್ಧವಾದ ಐಡಿಯಾಲಜಿಗಳು ಸದಾ ತಿಕ್ಕಾಟದಲ್ಲಿಯೇ ಇರಬೇಕು, ಅಲ್ಲಿಯೇ ಸರಿ ತಪ್ಪುಗಳು ನಿರ್ಧಾರವಾಗುತ್ತಾ ಹೋಗುತ್ತವೆ ಎನ್ನುತ್ತಿದ್ದರು. ಈ ದೇಶದ ರಾಜಕಾರಣವನ್ನು ಪ್ರಸ್ತಾಪಿಸುತ್ತಾ ‘ಸಿಂಹಾಸನ ಖಾಲಿ ಇದೆ ಎಂದು ಆಚೀಚೆ ಕಳ್ಳನಂತೆ ಗಮನಿಸಿ ಕಾವಲುಗಾರನೇ ಸಿಂಹಾಸನವೇರಿ ಕೂರುವುದು, ಆ ಸಮಯ ಸಾಧಕನನ್ನು ಕೆಳಗಿಳಿಸದೇ ನನಗೂ ಎಂದಾದರೂ ಅದೇ ಲಾಟರಿ ಹೊಡೆಯಬಹುದೆಂದು ಕಾಯುತ್ತಾ ಕುಳಿತಿರುವವ, ಸಿಂಹಾಸನದ ಅಯೋಗ್ಯನಿಗೆ ಪರಾಕ್ ಹೇಳುವುದು, ಎಂಥಾ ಆಡಳಿತನಯ್ಯಾ?’ ಎಂದು ಹೇಸಿಗೆ ವ್ಯಕ್ತಪಡಿಸುತ್ತಿದ್ದರು.

ಸರ್ಕಾರದ ವ್ಯವಸ್ಥೆಗಳಲ್ಲಿ ಪ್ರಜಾಪ್ರಭುತ್ವವೇ ಅನಿವಾರ್ಯ ಆಯ್ಕೆಯೆಂದು ಪ್ರತಿಪಾದಿಸಿದ ತೇಜಸ್ವಿ ‘ರಾಜಕಾರಣಿಗಳು ಮತಗಳಿಗಾಗಿ ಹುಚ್ಚರಿಗೆ, ಬೆಪ್ಪರಿಗೆ ಕಡೆಗೆ, ಕಳ್ಳರಿಗೂ ನಮಸ್ಕಾರ ಮಾಡುವುದನ್ನು ನೋಡಿ ಅಯ್ಯೋ ಅನ್ನುತ್ತೆ ಮಾರಾಯ.. ಎಲ್ಲಾ ಅವರವರ ಕರ್ಮ’ ಎಂದು ಗೇಲಿ ಮಾಡುತ್ತಿದ್ದರು.

ತೋಟದ ಬೇಲಿಗೆ ಹಂದಿ ಹಿಡಿಯಲೆಂದು ಯಾರೋ ಹಾಕಿದ ಕೇಬಲ್ ಉಳ್ಳಕ್ಕೆ ಅಕಸ್ಮಿಕವಾಗಿ ಬಿದ್ದ ನರಿಯನ್ನು ಕುತೂಹಲಕ್ಕೆ ತೂಕ ಮಾಡಿದ ತೇಜಸ್ವಿ, ತಾವೇ ಸಾಕಿದ ನಾಯಿಯನ್ನು ಪೋಸ್ಟ್‌ಮಾರ್ಟಮ್ ಮಾಡಿ ನೋಡಿದ್ದು ಸಹ ತಮ್ಮ ಜ್ಞಾನಾನ್ವೇಷಣೆಯ ಭಾಗವೆಂದೇ ತಿಳಿದಿದ್ದರು. ಮನೆಗೆ ನುಗ್ಗುತ್ತಿದ್ದ ಹಾವನ್ನು ಗುಂಡು ಹೊಡೆದು ಸಾಯಿಸಿದ್ದು ಆತ್ಮರಕ್ಷಣೆಯ ಅನಿವಾರ್ಯತೆಯಿಂದ ಮಾತ್ರ ಎಂದಿದ್ದರು.

*****

ನೆರೆ ಹಳ್ಳಿಯ ಯುವಕನೊಬ್ಬ ಒಮ್ಮೆ ತೇಜಸ್ವಿಯವರ ಮನೆಗೆ ಬಂದ. ಯಾವುದೋ ಕೆಲಸದಲ್ಲಿ ಮಗ್ನರಾಗಿದ್ದವರನ್ನು ನೋಡಿ, ಹೇಗಪ್ಪಾ ಮಾತನಾಡಿಸುವುದೆಂದು ಗೊಂದಲದಲ್ಲಿ ಹಿಂಜರಿಯುತ್ತಿದ್ದಾಗ ಅವರೇ ಗಮನಿಸಿ ‘ಏನಯ್ಯಾ, ಏನ್ ಸಮಾಚಾರ? ಏನು ಬಂದಿದ್ದು’ ಎಂದರು.



ವಿನ್ಯಾಸ: ದಿಲ್



www.tejaswivismaya.com



ತೇಜಸ್ವಿ ಚಿತ್ರಗಳು: ಮಲ್ಲಿಕಾರ್ಜುನ ಡಿ.ಜಿ

ಆತ 'ಸಾರ್ ಸಾರ್' ಎಂದು ಸಂಕೋಚಪಡುತ್ತಲೇ ಕೇಳೋದೋ ಬೇಡವೋ ಎಂದು ನಿಂತಲ್ಲೇ ನುಲಿಯತೊಡಗಿದ. ಇದರಿಂದ ಕಿರಿಕಿರಿಗೊಳಗಾದ ತೇಜಸ್ವಿ 'ಏನಂತ ಬಾಯ್ಬಿಟ್ಟು ಹೇಳಯ್ಯಾ.. ಸುಮ್ನೆ ನನ್ ಸಮಯನ್ನೂ ಹಾಳು ಮಾಡ್ಬೇಡ' ಎಂದು ಗದರಿಸಿದರು. ಆಗ ಬಂದವ 'ಸರ್, ನನ್ ಹೆಂಡ್ತಿಗೆ ಹೆರಿಗೆಯಾಗಿದೆ...' ಎಂದ.

ತೇಜಸ್ವಿ ಮನಸ್ಸಿನಲ್ಲೇ 'ಇವನೆಂಡ್ತಿಗೆ ಹೆರಿಗೆಯಾದ್ರೆ ನಾನೇನು ಮಾಡ್ಬೇಕಪ್ಪಾ ಈಗ' ಎಂದುಕೊಂಡು, 'ಸರಿ ಒಳ್ಳೇದಯ್ಯಾ.. ಮುಂದೇನು ಹೇಳು' ಎಂದರು.

'ಸರ್.. ಅದೂ ಅದೂ'

'ತಥ್ ನಿನ್ನ! ಏನ್ ಹೇಳಲಿಕ್ಕಿದೆಯೋ ಹೇಳಿ ಮುಗಿಸೋ ಮಾರಾಯ'

'ಸರ್.. ನನ್ ಹೆಂಡ್ತಿಗೆ ಹೆರಿಗೆಯಾಗಿದೆ'

'ಹೆರಿಗೆಯಾಗಿದೆ ಸರಿ, ಮುಂದೇನು ಹೇಳು'

'ಮಗಿಗೊಂದು ಒಳ್ಳೆ ಹೆಸರು ಹುಡುಕಿ ಕೊಡ್ತೀರಾ?'

–ಅವನ ಸುತ್ತು ಬಳಸು ಮಾತಿನಿಂದ ಸಿಟ್ಟು ಮಾಡಿಕೊಂಡ ತೇಜಸ್ವಿ 'ಮಕ್ಳು ಹುಟ್ಟಿಸೋಕಾಗುತ್ತೆ.. ಹೆಸರು ಇಡೋಕಾಗಲ್ವಾ? ಹೋಗಯ್ಯಾ, ನನಗೆ ಬೇರೆ ಕೆಲಸ ಇದೆ' ಎಂದರು.

ಮೂರ್ಖತನದಿಂದ ಅಪಮಾನಿತನಾದ ಈ ಯುವಕ ಬಂದ ದಾರಿಗೆ ಸುಂಕವಿಲ್ಲವೆಂದು ಹಿಂದಿರುಗುತ್ತಿದ್ದಾಗ 'ಬಾರಯ್ಯ ಇಲ್ಲಿ' ಎಂದು ಕರೆದು, ಅವನ ಹೆಸರು ಕೇಳಿ ಪರಿಚಯಿಸಿಕೊಂಡು ಕಾಫಿ ಕುಡಿಸಿ, 'ಒಂದು ನಾಲ್ಕು ದಿನ ಬಿಟ್ಟು ಬಂದು ಹೆಸರು ಕೇಳಿಕೊಂಡು ಹೋಗು' ಎಂದು ಕಳುಹಿಸಿದರು.

ತೇಜಸ್ವಿ ಜನಕ್ಕೆ ಸೇರದ ವ್ಯಕ್ತಿಯೆಂಬುದು ಕೆಲವರಿಗಾದ ಅನುಭವವೂ ಇರಬಹುದು. ಕೆಲವೊಮ್ಮೆ ಅತ್ಯಂತ ನಿರಾಸಕ್ತಿ, ಹಾಗೆಯೇ ಅನಾದರವನ್ನು ತೋರಿಸುತ್ತಿದ್ದರು. 'ಯಾಕಾದರೂ ಹೋದೆವೋ, ಯಾಕಾದರೂ ಮಾತನಾಡಿಸಿದೆನಪ್ಪಾ' ಎನ್ನುವಷ್ಟರ ಮಟ್ಟಿಗೆ ಕೆಲವೊಮ್ಮೆ ಆತ್ಮನಿಂದನೆ ಮಾಡಿಕೊಳ್ಳುವ ಮಟ್ಟದಲ್ಲಿಯೂ ಅವರು ಇರುವುದಿತ್ತು.

ಅವೇ ಅನಾದರ, ನಿರಾಸಕ್ತಿ, ನಿರ್ಲಕ್ಷ್ಯಗಳೇ ಅವರ ಕ್ರಿಯಾಶೀಲತೆಯ ಆಯುಧಗಳಿರಲೂಬಹುದು ಎನ್ನುವಂತಹ ಅನುಭವಗಳೂ ನನಗೆ ಆಗಿವೆ. ವಿವಾದಗಳಿಗೆ, ವಾಗ್ವಾದಗಳಿಗೆ ರಂಜನೀಯ ಚರ್ಚೆಗೆ ಕಾರಣವಾಗಬಲ್ಲಂತ ಸಬ್ಜೆಕ್ಟನ್ನೇ ಹುಡುಕಿ ಹೇಳಿಕೆ ಕೊಡುವ ಲೇಖಕರ ವರ್ಗ ಕಡೆಗೆ ಬಾಯಿ ಮುಚ್ಚುತ್ತಿದ್ದುದು ತೇಜಸ್ವಿ ಸ್ಟೇಟ್‌ಮೆಂಟ್ ನಂತರವೇ. ತೀರಾ ಜಿದ್ದಿಗೆ ಬಿದ್ದು ಅನಪೇಕ್ಷಿತ ವಾದ ವಿವಾದಕ್ಕೆ ಬರುವವರ ಕುರಿತು ತೇಜಸ್ವಿಯವರಲ್ಲಿ ಇದ್ದದ್ದು 'ನಿನ್ನೊಡನೆ ವಾಗ್ವಾದಕ್ಕೆ ನನಗೆ ಮನಸ್ಸಿಲ್ಲ' ಎಂಬಂತೆ ಹೇಳುವ ಮನಸ್ಥಿತಿ.

ತೇಜಸ್ವಿಯವರ 'ಜುಗಾರಿ ಕ್ರಾಸ್'ನಲ್ಲಿ ಬರುವ ಬಸ್‌ಸ್ಟ್ಯಾಂಡ್ ಪ್ರಕರಣ, 'ಮಾಯಾಲೋಕ'ದ ಯಾಜಿ ಪ್ರಹಸನ, 'ಪರಿಸರದ ಕಥೆ'ಯ ಈಚು ವೃತ್ತಾಂತ, 'ಕರ್ವಾಲೋ'ದ ಪಿಗ್ಮಟನ್ ಉವಾಚ ಇವೆಲ್ಲವೂ ಎಂಥಾ ಗಂಭೀರ ಸನ್ನಿವೇಶದಲ್ಲೂ ನಗೆಯನ್ನು ಸ್ಫೋಟಿಸುತ್ತದೆ. 'ಕಾಲಿಲ್ಲದೇ ಹಾವು ನಡೆಯುವಂತೆ ಕಿವಿಯಿಲ್ಲದೇ ಶಬ್ದ ಗ್ರಹಿಸಲು ಸಾಧ್ಯ ಎನ್ನಬಹುದಾ?' ಎನ್ನುವಂಥಾ ಪ್ರಶ್ನೆಯೆತ್ತಿ ನಮ್ಮನ್ನು ಯೋಚನೆಗೆ ಹಚ್ಚುತ್ತಿದ್ದರು.

ಚಿಕ್ಕಮಗಳೂರು ಜಿಲ್ಲೆಯ ಕಾಫಿ ಸಂಸ್ಕೃತಿ, ಈ ನೆಲದ ನಿಜ ಸಂಸ್ಕೃತಿ– ಸೃಜನಶೀಲತೆಯನ್ನು ಕೊಂದು ಹಾಕಿರುವುದನ್ನು ಪ್ರಸ್ತಾಪಿಸಿ, 'ಇಲ್ಲಿ ಯಾವುದೋ ಒಂದು ಭಯಾನಕ ಕೊರತೆ ಇದೆ. ಇಂಥದೊಂದು ಸಾಂಸ್ಕೃತಿಕ ನಿಷ್ಕ್ರಿಯತೆ ಕೇವಲ ಆಕಸ್ಮಿಕ ಅಲ್ಲ' ಎನ್ನುತ್ತಿದ್ದರು ತೇಜಸ್ವಿ. ಕನ್ನಡದ ಅಭಿವೃದ್ಧಿಗೆ ಯೂನಿಕೋಡ್ ಸೌಲಭ್ಯವನ್ನು ರೂಪಿಸಲು ಹಾಸನದ ಮಾರುತಿ ಸಾಫ್ಟ್‌ವೇರ್ ಯುವಕರಾದ ಆನಂದ್, ಮಂಜಾಚಾರಿ ಹಾಗೂ ಅನ್ನರಸನ್‌ರೊಂದಿಗೆ ಶ್ರಮಿಸಿದ ತೇಜಸ್ವಿ ನೀಡಿದ 'ಕುವೆಂಪು ತಂತ್ರಾಂಶ' ಕನ್ನಡದ ಮಾಹಿತಿ ತಂತ್ರಜ್ಞಾನಕ್ಕೆ ಸಂದ ಬಹುದೊಡ್ಡ ಕೊಡುಗೆ.

ದೇಶೀ ಜ್ಞಾನದ ಅಮೂಲ್ಯತೆಯನ್ನು, ಸ್ತ್ರೀಶಕ್ತಿಯ ಘನತೆಯನ್ನು, ಪ್ರಕೃತಿಯ ಸಂಕೀರ್ಣತೆಯನ್ನು ತೇಜಸ್ವಿಯಷ್ಟು ಅರ್ಥಪೂರ್ಣವಾಗಿ ಅನಾವರಣಗೊಳಿಸಿದವರು ಕನ್ನಡದ ಮಟ್ಟಿಗೆ ಸದ್ಯಕ್ಕೆ ಬೇರಾರೂ ಕಾಣುತ್ತಿಲ್ಲ. ವ್ಯಕ್ತಿಯೊಬ್ಬ ತನ್ನ ಸ್ವಂತ ಪರಿಶ್ರಮದಿಂದ ಹಾಗೂ ಪ್ರತಿಭೆಯಿಂದ ಐಕಾನ್ ಆಗುತ್ತಿದ್ದಂತೆಯೇ ಹಲವರು ಇಲ್ಲ ಸಲ್ಲದ ಸಂಬಂಧಗಳನ್ನು ಆರೋಪಿಸಿಕೊಂಡು ಟಿ.ವಿ. ಸಂದರ್ಶನಗಳಲ್ಲಿ, ಫೋಟೋಗಳಲ್ಲಿ ಗಣ್ಯರ ಹಿಂದೆ ಕತ್ತು ನುಸುಳಿಸುವ ಇಣಕಪ್ಪಗಳಂತೆ ವರ್ತಿಸುವುದು ಕಾಲ ದೇಶಗಳನ್ನೂ ಮೀರಿ ನಡೆಯುವ ನಿತ್ಯ ಸತ್ಯ. ಆದರೆ ತೇಜಸ್ವಿಯವರು ನಾವ್ಯಾರೂ ಕಲ್ಪನೆಯಲ್ಲೂ ಅಂದುಕೊಳ್ಳದ ಸಮಾಜದ ವಿವಿಧ ಸ್ತರದ ಜನರೊಡನೆ ಅಸಾಧಾರಣ ಸಂಬಂಧ, ಸಂಪರ್ಕ ಹಾಗೂ ಸಂವಹನವನ್ನು ಸಾಧಿಸಿದ್ದರು. ಇವೇ ಅವರ ಸಾಹಿತ್ಯ ಸೃಜನೆಗೆ ಸಹಜವಾದ ಮಣ್ಣಿನ ವಾಸನೆಯನ್ನು ಒದಗಿಸಿವೆ. ಅವರ ಅಭಿಪ್ರಾಯ, ಆಲೋಚನೆ, ತೀರ್ಮಾನಗಳಿಗೆ ಈ ತಳಮಟ್ಟದ ಭಾವನಾತ್ಮಕ ಸಂವಾದವೇ ಕಾರಣ.

ಅವರ ಕೃತಿಗಳಲ್ಲಿ ತೀರಾ ವಿರಳವಾಗಿ ಪ್ರಸ್ತಾಪವಾಗುವ ಸಾವಿನ ಕುರಿತು ಅವರು ಹೀಗೆ ಹೇಳಿದ್ದರು– 'ಸಾಯುವಾಗ ಮನುಷ್ಯ ಏನನ್ನು ಬಯಸುತ್ತಾನೋ ಅವನು ಅದೇ ಆಗಿರುತ್ತಾನೆ. ಜೀವನದಾದ್ಯಂತ ಏನನ್ನೋ ಬಯಸಿ, ಸಾಯುವಾಗ ಇನ್ನೊಂದನ್ನು ಬಯಸಲು ಸಾಧ್ಯವಿಲ್ಲ. ಈ ಜಗತ್ತಿನಲ್ಲಿ ಒಂದು ಮಾತ್ರ ಅಭಿಪ್ರಾಯದ ವಿಷಯವೂ ಅಲ್ಲ, ಅನುಮಾನದ ಸಂಗತಿಯೂ ಅಲ್ಲ– ಅದೇ ಸಾವು. ಸಾವಿನ ಬಗೆಗಿನ ಅರಿವು, ಅರಿವಿನ ಸಾವಿನಲ್ಲಿ ಪರ್ಯವಸಾನವಾಗುತ್ತದೆ. ಅಂತಿಮ ಸತ್ಯವೆಂದರೆ.. ಸಾವನ್ನು ಅರಿಯಲು ಇರುವ ಒಂದೇ ಒಂದು ಮಾರ್ಗವೆಂದರೆ ಬದುಕು ಮಾತ್ರ.'

'ಬರಹಗಾರ ಸಾಹಿತಿ ಎನಿಸಿಕೊಂಡ ದಿನ ಸಾಯುತ್ತಾನೆ' ಎಂದು ಅವರೊಮ್ಮೆ ಹೇಳಿದ್ದರು. ಅವರ ಈ ವರೆಗಿನ ಬರಹಗಳನ್ನು ಇಡಿಯಾಗಿ ಅವಲೋಕಿಸುವಾಗ ಸತ್ಯ ದರ್ಶನಕ್ಕಾಗಿ ಸತತವಾದ ಹಾಗೂ ಪ್ರಾಮಾಣಿಕವಾದ ಹುಡುಕಾಟ ಸ್ಪಷ್ಟವಾಗಿ ಗೋಚರವಾಗುತ್ತದೆ.

ಕುದುರೆಮುಖ ಆಂದೋಲನ ಪರಾಕಾಷ್ಠೆಯಲ್ಲಿದ್ದಾಗ, ಸ್ಥಳೀಯ ಪರಿಸರ ಸಂವೇದಿ ಸಂಸ್ಥೆಯಾದ ನಮ್ಮ ನೇಚರ್ ಕ್ಲಬ್ ವತಿಯಿಂದ ಗಣಿಗಾರಿಕೆಯನ್ನು ವಿರೋಧಿಸಿ ಹಸ್ತಾಕ್ಷರ ಅಭಿಯಾನವನ್ನು ಪ್ರಾರಂಭಿಸಿದೆವು. ನಮ್ಮ ಸಂಸ್ಥೆಯ ಹಿರಿಯ ಸದಸ್ಯರಾದ ತೇಜಸ್ವಿಯವರ ಹಸ್ತಾಕ್ಷರದಿಂದಲೇ ಅಭಿಯಾನ ಪ್ರಾರಂಭಿಸಿದ ನಾವು ಸುಮಾರು 5000 ಸಹಿಗಳನ್ನು ಸಂಗ್ರಹಿಸಿದೆವು. ಅದನ್ನು ರಾಷ್ಟ್ರಪತಿ, ಪ್ರಧಾನಮಂತ್ರಿ, ರಾಜ್ಯಪಾಲ, ಮುಖ್ಯಮಂತ್ರಿ ಹಾಗೂ ಜಿಲ್ಲಾಧಿಕಾರಿಗೆ ಕಳುಹಿಸಿ ಕೊಟ್ಟಿದ್ದಲ್ಲದೇ ಚಿಕ್ಕಮಗಳೂರಿನಲ್ಲಿ ನಡೆದ ರ್‍ಯಾಲಿಯಲ್ಲಿ ತೇಜಸ್ವಿಯವರನ್ನು ಭಾಗವಹಿಸುವಂತೆ ಆಹ್ವಾನಿಸಿ ಯಶಸ್ವಿಯೂ ಆದೆವು.

ತೇಜಸ್ವಿ ತಮ್ಮ 'ನೆರೆಹೊರೆಯ ಗೆಳೆಯರು' ಎಂಬ ಪುಸ್ತಕದ ಮುನ್ನುಡಿಯಲ್ಲಿ 'ಇಪ್ಪತ್ತೊಂದನೆಯ ಶತಮಾನಕ್ಕೆ ದಾಟುವ ಮುನ್ನ' ಎಂದು ನಮೂದಿಸಿ ಹೀಗೆ ಬರೆದಿದ್ದಾರೆ.

"ಭೂಮಿಯಿಂದ 2,24,000 ಸಾವಿರ ಮೈಲಿ ದೂರದಲ್ಲಿ, ಕತ್ತಲಲ್ಲಿ ಕತ್ತಲಾಗಿರುವ ಬಾಹ್ಯಾಕಾಶದಲ್ಲಿ ಚಂದ್ರನೆಡೆಗೆ ಸಾಗುತ್ತಾ ಹಿಂದೆ ತಿರುಗಿ ನೋಡಿದಾಗ ಬಾಹ್ಯಾಕಾಶ ಯಾತ್ರಿಗಳಿಗೆ ಒಂದು ಅವಿಸ್ಮರಣೀಯ ದೃಶ್ಯ ಕಾಣಿಸಿತು. ನೀಲಿ, ಹಸಿರು, ಕೆಂಪು ವರ್ಣದ ಭೂಮಿ ಹಿರಿದಾಗುತ್ತಿದ್ದ ಚಂದ್ರನ ಹಿಂಭಾಗದ ದಿಗಂತದಿಂದ ವಜ್ರದಂತೆ ಪ್ರಜ್ವಲಿಸುತ್ತಾ ಮೂಡುತ್ತಿತ್ತು! ಸುತ್ತ ಜೀವಕೋಟಿಯ ಸುಳಿವೂ ಇಲ್ಲದ ಚಂದ್ರ ಮತ್ತಿತರ ಬಂಜರು ಗ್ರಹಗಳು! ಮುಂದೆ ಅನಂತವಾಗಿ ಹಬ್ಬಿರುವ ಕರಿಯ ಶೂನ್ಯಾಕಾಶ! ಜೀವದ ಸುಳಿವಿಲ್ಲದ ಸೌರಮಂಡಲದ ನಡುವೆ ಹೊಳೆಯುತ್ತಿರುವ ನೀಲಿಯ ಏಕಮಾತ್ರ ಗ್ರಹ ಭೂಮಿ. 'ಇದಕ್ಕಿಂತ ಅನರ್ಘ್ಯವಾದದ್ದು, ಅಮೂಲ್ಯವಾದದ್ದು ಯಾವುದೂ ಇಲ್ಲ' ಎನಿಸಿತು ಗಗನ ಯಾತ್ರಿಗಳಿಗೆ! ನಮ್ಮ ಸೀಬೆ ಗಿಡದ ಮೇಲಿನ ಅಳಿಲು, ಮುಬಿಯಾ ನದಿ ತೀರದ ಕಪ್ಪೆ, ಹಳ್ಳದ ಪಕ್ಕ ಅಡ್ಡಡ್ಡ ಓಡಾಡುವ ವಿಚಿತ್ರ ಏಡಿ, ಆಫ್ರಿಕಾದ ಯಾವುದೋ ಕಗ್ಗಾಡಿನಲ್ಲಿ ಗಾಳಿಯಲ್ಲಿ ತೇಲಾಡುವ ಇಲಿ, ಕೆರೆಯ ಕಲ್ಲಿನ ಮೇಲೆ ಕುಳಿತು ಬಿಸಿಲು ಕಾಯಿಸುತ್ತಿರುವ ಆಮೆ, ಇವೆಲ್ಲದರ ಸಂಯೋಜನೆ ಎರಡು ಲಕ್ಷ ಮೈಲು ದೂರದಲ್ಲಿ ಗಗನ ಯಾತ್ರಿಗಳು ಕಂಡ ಕಾಣ್ಕೆ. ಈ ಸತ್ಯವನ್ನು ಅಷ್ಟು ದೂರ ಹೋಗದೇ ಇಲ್ಲಿದ್ದೇ ಸಾಕ್ಷಾತ್ಕರಿಸಿಕೊಂಡ ಮನುಷ್ಯ ಜೆರಾಲ್ಡ್ ಡ್ಯುರೆಲ್. 'ಈ ಭೂಮಿಯ ಅತಿ ಸಾಮಾನ್ಯವಾದುದು, ಸರಳವಾದುದೂ ಸಹಾ ಅತ್ಯಮೋಘ, ಅಸಾಮಾನ್ಯ ಎಂದು ನಾವು ತಿಳಿದಿರುವುದರಷ್ಟೇ ವಿಶ್ವಮಾನ್ಯ' ಎಂದು ತೋರಿಸಿಕೊಟ್ಟಾತ ಜೆರಾಲ್ಡ್ ಡ್ಯುರೆಲ್. ಸಾಹಿತ್ಯದ ಸ್ವಾರಸ್ಯದಲ್ಲಿ ಕೃತಿಯಲ್ಲಿ ಅಂತರ್ಗತವಾಗಿರುವ ತಾತ್ವಿಕ ಎಳೆಯನ್ನು ಸಹಾ ಗ್ರಹಿಸುವುದು ಅವಶ್ಯ."

ಮೇಲೆ ಬರುವ ಜೆರಾಲ್ಡ್ ಡ್ಯುರೆಲ್ ಹೆಸರಿನ ಜಾಗದಲ್ಲಿ ನಿರ್ವಿವಾದವಾಗಿ ಪೂರ್ಣಚಂದ್ರ ತೇಜಸ್ವಿಯವರ ಹೆಸರನ್ನೂ ಸಂವಾದಿಯಾಗಿ ಸೇರಿಸಬಹುದು. ಇದು ಖಂಡಿತಾ 'ವ್ಯಕ್ತಿಪೂಜೆ' ಎನಿಸಿಕೊಳ್ಳಲಾರದು.

(ಮುಗಿಯಿತು)



www.tejaswivismaya.com